# ಇನ್‌ಸ್ಟಾಗ್ರಾಮ್ ಸ್ಟಾರ್ ರೇಸ್!





ಬಾಲಿವುಡ್ ತಾರೆಯರಲ್ಲಿ ಇನ್‌ಸ್ಟಾಗ್ರಾಮ್ ಪೈಪೋಟಿ ಜೋರಾಗಿದೆ. ಸಿನಿಮಾಗಳು ಥಿಯೇಟರ್‌ನಲ್ಲಿ ಬಿಡುಗಡೆಯಾಗದೆ ಇದ್ದರೂ ಓಟಿಟಿ ಫ್ಲಾಟ್‌ಫಾರಂಗಳಲ್ಲಿ ಬಿಡುಗಡೆಯಾಗುತ್ತಿರುವ ಹಿನ್ನೆಲೆಯಲ್ಲಿ ತಾರೆಯರ ಇನ್‌ಸ್ಟಾಗ್ರಾಮ್ ಪೋಸ್ಟಿಂಗ್‌ಗಳಿಗೂ ಕಳೆ ಏರತೊಡಗಿದೆ. ಸದ್ಯಕ್ಕೆ ತಾರೆಯರ ಜನಪ್ರಿಯತೆಯ ಮಾನದಂಡವೂ ಇನ್‌ಸ್ಟಾಗ್ರಾಮ್ ವೀಕ್ಷಕರ ಸಂಖ್ಯೆಯ ಮೇಲೆಯೇ ನಿರ್ಧಾರ ಆಗುತ್ತದೋ ಎನ್ನುವಂತಿದೆ.

ಇನ್‌ಸ್ಟಾಗ್ರಾಮ್‌ನಲ್ಲಿ ಸದ್ಯಕ್ಕೆ ಅತಿ ಹೆಚ್ಚು ವೀಕ್ಷಕರನ್ನು ಹೊಂದಿರುವಾಕೆ ಪ್ರಿಯಾಂಕಾ ಚೋಪ್ರಾ. ಆಕೆಯ ಖಾತೆಯ ವೀಕ್ಷಕರ ಸಂಖ್ಯೆ 5.46 ಕೋಟಿ. ಫಾರಿನ್ ಗಂಡನನ್ನು ಮದುವೆಯಾಗಿ ಅಮೆರಿಕದಲ್ಲಿ ನೆಲೆಸಿದರೂ ಆಕೆಯ ಅಭಿಮಾನಿಗಳಿಗೆ ಬೇಸರವಿಲ್ಲ. ಅದೂ ಅಲ್ಲದೆ ಈ ಅಮೆರಿಕನ್ ವಾಸವೂ ಆಕೆಯ ಖಾತೆಯ ವೀಕ್ಷಕರ ಸಂಖ್ಯೆ ಹೆಚ್ಚಾಗಲು ನೆರವಾದಂತಿದೆ. ಜುಲೈ ಮೊದಲ ವಾರದ ಕೊನೆಗೆ ಇನ್‌ಸ್ಟಾಗ್ರಾಮ್‌ನಲ್ಲಿ 5 ಕೋಟಿ ವೀಕ್ಷಕರ ಸಂಖ್ಯೆಯನ್ನು ದಾಟಿದ ದೀಪಿಕಾ ಎರಡನೇ ಸ್ಥಾನದಲ್ಲಿದ್ದಾರೆ. ಆಕೆಯ ಬೆನ್ನಲ್ಲೇ ಶ್ರದ್ಧಾ ಕಪೂರ್ ನಾಗಾಲೋಟ ಮುಂದುವರಿದಿದೆ. ಶ್ರದ್ಧಾಳ ಇನ್‌ಸ್ಟಾಗ್ರಾಮ್ ವೀಕ್ಷಕರ ಸಂಖ್ಯೆ 4.98 ಕೋಟಿ.

ಆದರೆ ಇನ್‌ಸ್ಟಾಗ್ರಾಮ್ ಜನಪ್ರಿಯತೆಯಲ್ಲಿ ಇವರೆಲ್ಲರನ್ನೂ ಮೀರಿಸಿರುವುದು ಕ್ರಿಕೆಟ್ ತಾರೆ ವಿರಾಟ್ ಕೊಹ್ಲಿ. ಅನುಷ್ಕಾಗೆ ಸಿಟ್ಟು ಬಂದೀತು. ಅನುಷ್ಕಾ ಗಂಡ ಕೊಹ್ಲಿಯ ಜನಪ್ರಿಯತೆ ಉಳಿದ ತಾರೆಯರ ಕಣ್ಣುಕುಕ್ಕುವಂತಿದೆ.







## ಓಟಿಟಿ: ಬೊಂಬಾಟ್ ಕಲೆಕ್ಷನ್

ಕೊರೊನಾ ಭೀತಿಯಿಂದ ಥಿಯೇಟರ್‌ಗಳೆಲ್ಲ ಮುಚ್ಚಿ ಕಂಗಾಲಾಗಿದ್ದ ಬಾಲಿವುಡ್ ನಿರ್ಮಾಪಕರು ಓಟಿಟಿ ಪ್ಲಾಟ್‌ಫಾರ್ಮ್‌ಗಳ ಜನಪ್ರಿಯತೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸಮಾಧಾನದ ನಿಟ್ಟುಸಿರು ಬಿಟ್ಟಿದ್ದಾರೆ. ಲಾಕ್‌ಡೌನ್‌ನಿಂದ ಮನೆಯಲ್ಲೇ ಬಂಧಿಗಳಾಗಿರುವ ಜನ ಮನರಂಜನೆಯೇ ಗತಿಯೆಂದು ವಿವಿಧ ಓಟಿಟಿ ಪ್ಲಾಟ್‌ಫಾರ್ಮ್‌ಗಳನ್ನು ಆಶ್ರಯಿಸುತ್ತಿರುವುದು ಹೆಚ್ಚಾಗುತ್ತಿದೆ.

2020ರ ಮೊದಲ ಆರು ತಿಂಗಳಲ್ಲಿ ಓಟಿಟಿ ಮೂಲಕ ಬಿಡುಗಡೆಯಾದ ಸಿನಿಮಾಗಳು ಒಟ್ಟು 570 ಕೋಟಿ ರೂಪಾಯಿ ಕಲೆಕ್ಷನ್ ಮಾಡಿವೆಯಂತೆ. ‘ಲಕ್ಷ್ಮೀ ಬಾಂಬ್’, ‘ಭುಜ್’, ‘ಸಡಕ್ 2’, ‘ದಿಲ್ ಬೇಚಾರಾ’ ಮುಂತಾಗಿ ಹಲವು ಚಿತ್ರಗಳು ವಿವಿಧ ಓಟಿಟಿಗಳಲ್ಲಿ ಬಿಡುಗಡೆ ಕಂಡು ನಿರ್ಮಾಪಕರಿಗೆ ಸಾಕಷ್ಟು ಕಲೆಕ್ಷನ್ ಆಗಿದೆಯಂತೆ.

ಅಕ್ಷಯ ಕುಮಾರ್ ಮತ್ತು ಕಿಯಾರಾ ಅಡ್ವಾಣಿ ಅಭಿನಯಿಸಿದ ಡಿಸ್ನಿ ಹಾಟ್‌ಸ್ಟಾರ್ ಫ್ಲಾಟ್‌ಫಾರಂನಲ್ಲಿ ಬಿಡುಗಡೆಯಾದ ‘ಲಕ್ಷ್ಮೀ ಬಾಂಬ್’ ಚಿತ್ರದ ಕಲೆಕ್ಷನ್ನೇ 125 ಕೋಟಿ ರೂಪಾಯಿ ದಾಟಿದೆ ಎಂದು ಸುದ್ದಿ ಇದೆ. ತಮಿಳಿನಿಂದ ಹಿಂದಿಗೆ ಬಂದೂ ಇಷ್ಟೊಂದು ಕಲೆಕ್ಷನ್ ಆದದ್ದು ನೋಡಿ, ಹಲವು ನಿರ್ಮಾಪಕರು ಸೂಪರ್‌ಹಿಟ್ ತಮಿಳು ಚಿತ್ರಗಳ ಪಟ್ಟಿ ಹಿಡಿದು ಮುಂದಿನ ರೀಮೇಕ್‌ಗೆ ಹುಡುಕಾಡುತ್ತಿದ್ದಾರಂತೆ.

■ ಬಿಂದು